

ಅರುಣ ಪಿ. ಭಟ್ಟ




## ವಾರಭವಿಷ್ಯ: 20.11.2025ರಿಂದ 26.11.2025ರವರೆಗೆ




ಈ ವಾರದ ಆರಂಭದಲ್ಲೇ ಸಂಬಂಧಿಕರ ಭೇಟಿಗೆ ನಿಶ್ಚಯ ಮಾಡುವ ಸಾಧ್ಯತೆ ಇದೆ. ಸೋದರ ಸಂಬಂಧಿಗಳನ್ನು ಭೇಟಿ ಆಗಲಿದ್ದೀರಿ. ತಾತ್ಕಾಲಿಕ ವರ್ಗಾವಣೆ ಸಾಧ್ಯತೆ ಇದೆ. ಕೌಟುಂಬಿಕ ಜೀವನ ಸಂತೋಷವಾಗಿರುತ್ತದೆ. ಸಂಗಾತಿ ಮಕ್ಕಳ ಜತೆಗಿನ ಬಾಂಧವ್ಯ ಉತ್ತಮವಾಗಿರುತ್ತದೆ. ವ್ಯಾಪಾರ ವ್ಯವಹಾರ ಮಾಡುತ್ತಿರುವವರಿಗೆ ಉತ್ತಮ ಪ್ರಗತಿ ಇದೆ. ಶುಭದಿನ: **24.** ಗಣಪತಿ ಸುಬ್ರಹ್ಮಣ್ಯ ಜಪ ಮಾಡಿರಿ.




ಈ ವಾರದ ಶುರುವಿನಲ್ಲೇ ಆದಾಯ ಹೆಚ್ಚಿಸಿಕೊಳ್ಳುವಲ್ಲಿ ಯಶಸ್ವಿಯಾಗುತ್ತೀರಿ. ಜತೆಗೆ ಖರ್ಚನ್ನು ಕೂಡ ಕಡಿಮೆ ಮಾಡಿಕೊಳ್ಳುವಲ್ಲಿ ಯಶಸ್ವಿ ಆಗುತ್ತೀರಿ. ಹೆಚ್ಚು ಚಟುವಟಿಕೆಯಿಂದ ಕೆಲಸ ಮಾಡುತ್ತೀರಿ. ಪ್ರೀತಿಪಾತ್ರರಿಗೆ ಉಡುಗೊರೆಗಳನ್ನು ನೀಡುವ ಸಾಧ್ಯತೆ ಇದೆ. ಜೀವನದಲ್ಲಿ ಭಿನ್ನಾಭಿಪ್ರಾಯ ತಲೆದೋರಲಿದೆ. ನಿರೀಕ್ಷಿತವಾದ ಫಲಿತಾಂಶ ದೊರೆಯಲಿದೆ. ಶುಭದಿನ: 25. ಹನುಮಾನ್ ಚಾಲೀಸ ಪಠಿಸಿರಿ.





ಉದ್ಯಮಿಗಳಿಗೆ ಅತ್ಯುತ್ತಮವಾದ ಸಮಯ. ಆರೋಗ್ಯ ಕೂಡ ಈ ಅವಧಿಯಲ್ಲಿ ಉತ್ತಮವಾಗಿರುತ್ತದೆ. ನೀವು ಅಂದುಕೊಂಡ ಹಲವು ಕೆಲಸಗಳು ಪೂರ್ಣಗೊಳ್ಳುತ್ತವೆ. ಉದ್ಯೋಗಸ್ಥರಿಗೆ ಕೆಲಸದಲ್ಲಿ ಗುಣಮಟ್ಟ ವೃದ್ಧಿಯಾಗಲಿದೆ. ಸಾಮಾಜಿಕ ಸ್ಥಾನಮಾನವು ಹೆಚ್ಚಾಗಲಿದೆ. ಉತ್ಸಾಹ ಸಹ ಹೆಚ್ಚಾಗಲಿದೆ. ಆರೋಗ್ಯದಲ್ಲಿ ಸ್ವಲ್ಪ ಮಟ್ಟಿಗೆ ಏರಿಳಿತ ಕಾಣುತ್ತೀರಿ. ಶುಭದಿನ: **26.** ಗಣಪತಿಗೆ ದೂರ್ವಾರ್ಚನೆ ಮಾಡಿರಿ.





ಶೈಕ್ಷಣಿಕ ವಲಯದಲ್ಲಿ ಇರುವವರು, ವಿದ್ಯಾರ್ಥಿಗಳಿಗೆ ಅತ್ಯುತ್ತಮವಾದ ಅವಧಿ ಇದು. ಬಡ್ತಿ ಸಿಗುವ ಸಾಧ್ಯತೆಯೂ ಇದೆ. ಆರೋಗ್ಯದ ಬಗ್ಗೆ ನಿರ್ಲಕ್ಷ್ಯ ಮಾಡದೇ ಕಡ್ಡಾಯವಾಗಿ ವೈದ್ಯರಿಂದ ಚಿಕಿತ್ಸೆ ಪಡೆದುಕೊಳ್ಳಿ. ಮುಂಬರುವ ದಿನಗಳಲ್ಲಿ ಹಲವು ಸಕಾರಾತ್ಮಕ ಅವಕಾಶಗಳು ನಿಮ್ಮನ್ನು ಹುಡುಕಿಕೊಂಡು ಬರಲಿವೆ. ಯಾವುದಾದರೂ ಮೂಲದಿಂದ ವಾರದ ಅಂತ್ಯಕ್ಕೆ ಹಣ ಸೇರಲಿದೆ. ಶುಭದಿನ: **22.** ಶಿವಕವಚ ಪಠಣ ಮಾಡಿರಿ.




ವಾರದ ಶುರುವಿನಿಂದಲೇ ಕೆಲಸಗಳನ್ನು ಪೂರೈಸಲು ಶ್ರಮ ಹಾಕುತ್ತೀರಿ. ಹಣ ಹೂಡಿಕೆ ವ್ಯವಹಾರದಲ್ಲಿ ನಿಮ್ಮ ಸ್ಥಾನಮಾನಕ್ಕೆ ಧಕ್ಕೆ ಆಗುವ ಸಾಧ್ಯತೆ ಇದೆ. ವಂಚಕರ ಬಗ್ಗೆ ಎಚ್ಚರಿಕೆಯಿಂದ ಇರಬೇಕು. ಈ ಅವಧಿಯಲ್ಲಿ ನಿಮ್ಮ ಆರೋಗ್ಯ ಕೈಕೊಡುವ ಸಾಧ್ಯತೆ ಇದೆ. ಧಾರ್ಮಿಕ ಕ್ಷೇತ್ರಗಳಿಗೆ ಭೇಟಿ ನೀಡುವ ಸಾಧ್ಯತೆ ಇದೆ. ಹಣಕಾಸು ಸ್ಥಿತಿ ಉತ್ತಮವಾಗಲಿದೆ. ಶುಭದಿನ: **24.** ಲಿಂಗಾಷ್ಟಕ ಪಠಿಸಿರಿ.





ವ್ಯಾಪಾರದಲ್ಲಿ ನಿಮ್ಮ ಕನಸನ್ನು ಈಡೇರಿಸಿಕೊಳ್ಳಲು ಶ್ರಮ ಹಾಕುತ್ತೀರಿ. ಧಾರ್ಮಿಕ ಕೆಲಸ ಕಾರ್ಯಗಳಲ್ಲಿ ಹಿನ್ನಡೆ ಅನುಭವಿಸಬೇಕಾಗುತ್ತದೆ. ನಿಮ್ಮ ವರ್ಚಸ್ಸು ಹಾಳು ಮಾಡಲು ವಿರೋಧಿ ಪಾಳಯದವರು ಪ್ರಯತ್ನ ಪಡುತ್ತಾರೆ. ಉನ್ನತ ಶಿಕ್ಷಣಕ್ಕೆ ಪ್ರಯತ್ನಿಸುತ್ತಿರುವವರಿಗೆ ಅನುಕೂಲ ಇದೆ. ಬದುಕಿನಲ್ಲಿ ಹುದ್ದೆ ಹಾಗೂ ಘನತೆ ಹೆಚ್ಚಳ ಆಗಲಿದೆ. ಶುಭದಿನ: **26.** ಚಂಡಿ ಪಾರಾಯಣ ಮಾಡಿರಿ.





ಕೌಟುಂಬಿಕ ವಿಚಾರದಲ್ಲಿ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಹಣಕಾಸಿಗೆ ಏನೂ ಕೊರತೆ ಇರುವುದಿಲ್ಲ. ಉದ್ಯೋಗ ಹಾಗೂ ಆರೋಗ್ಯದಲ್ಲಿ ಆಲಸ್ಯ ನಿಮ್ಮನ್ನು ಕಾಡಬಹುದು. ನಿಮ್ಮ ದೈನಂದಿನ ವ್ಯವಹಾರಗಳಲ್ಲಿ ಏರಿಳಿತಗಳಾಗುತ್ತವೆ. ಮನೆಗೆ ಸಂಬಂಧಿಸಿದ ವಿಷಯಗಳು ಪ್ರಾಮುಖ್ಯ ಪಡೆಯುತ್ತವೆ. ಶ್ರಮಕ್ಕೆ ಉತ್ತಮ ಫಲಿತಾಂಶ ಸಿಗಲು ಶುರುವಾಗುತ್ತದೆ. ಶುಭದಿನ: **24.** ಸೌಂದರ್ಯ ಲಹರಿ ಪಠಿಸಿರಿ.





ಯಶಸ್ಸು ದೊರೆಯುವ ಅವಕಾಶಗಳಿವೆ. ಗೌರವದ ಸ್ಥಾನಮಾನ ದೊರೆಯಲಿದೆ. ಆದಾಯ ಮೂಲಗಳು ನೀವು ಅಂದುಕೊಂಡಿದ್ದಕ್ಕಿಂತ ಹೆಚ್ಚಿನ ಲಾಭವನ್ನು ತಂದುಕೊಡುವ ಸಾಧ್ಯತೆ ಇದೆ. ದಿಢೀರ್ ಖರ್ಚಿನ ಪ್ರಮಾಣ ಹೆಚ್ಚಳವಾಗಬಹುದು. ಪೂರ್ಣಗೊಳಿಸಬೇಕಾದ ಕೆಲಸದ ಒತ್ತಡ ಹೆಚ್ಚಾಗುತ್ತದೆ. ನಿಮ್ಮ ಖರ್ಚು ನಿಯಂತ್ರಿಸಬೇಕಾದ ಅನಿವಾರ್ಯ ಎದುರಾಗುತ್ತದೆ. ಶುಭದಿನ: **21.** ವೆಂಕಟೇಶ್ವರ ಸ್ತೋತ್ರ ಪಠಿಸಿರಿ.





ಕೌಟುಂಬಿಕ ಜೀವನದಲ್ಲಿ ನಿಮ್ಮ ಜವಾಬ್ದಾರಿಗಳು ಹೆಚ್ಚಾಗಲಿವೆ. ಸಂತಾನ ನಿರೀಕ್ಷೆಯಲ್ಲಿ ಇರುವ ದಂಪತಿಗೆ ಶುಭ ಸುದ್ದಿಯ ಯೋಗ. ಧಾರ್ಮಿಕ ಕ್ಷೇತ್ರಗಳಿಗೆ ಭೇಟಿ ನೀಡುವ ಸಾಧ್ಯತೆಗಳಿವೆ. ಸಂಗಾತಿ ಜತೆಗೆ ಇಷ್ಟದ ಪ್ರದೇಶಗಳಿಗೆ ಪ್ರಯಾಣಕ್ಕೆ ತೆರಳುವಿರಿ. ವಾರದ ಅಂತ್ಯಕ್ಕೆ ಸರಿಯುತ್ತಾ ನಿಮ್ಮ ಹಳೇ ಸಮಸ್ಯೆಗಳು ಮರುಕಳಿಸುವ ಸಾಧ್ಯತೆ ಇದೆ. ಅನಾರೋಗ್ಯ ಸಮಸ್ಯೆ ಕಾಡಲಿದೆ. ಶುಭದಿನ: **20.** ಕಾಲಭೈರವನ ಸೇವೆ ಮಾಡಿರಿ.




ನಿಮ್ಮ ಶ್ರಮಕ್ಕೆ ಉತ್ತಮ ಪ್ರತಿಫಲ ದೊರೆಯುತ್ತದೆ. ಕುಟುಂಬದಲ್ಲಿ ಸಕಾರಾತ್ಮಕ ವಾತಾವರಣ ಸೃಷ್ಟಿಸುವಲ್ಲಿ ಯಶಸ್ವಿಯಾಗುತ್ತೀರಿ. ಉದ್ಯೋಗಸ್ಥರಿಗೆ ಬಡ್ತಿ ದೊರೆಯುವ ಅವಕಾಶಗಳಿವೆ. ನಿಮ್ಮ ಕೌಶಲವನ್ನು ಹೆಚ್ಚಿಸಿಕೊಳ್ಳಲು ಶ್ರಮ ಹಾಕಿ. ಆ ಮೂಲಕ ನಿಮ್ಮ ಕೆಲಸವನ್ನು ತಪ್ಪಿಲ್ಲದಂತೆ ಮಾಡಲು ಸಾಧ್ಯವಾಗುತ್ತದೆ. ಆದಾಯ ಉತ್ತಮವಾಗಿರುತ್ತದೆ. ಶುಭದಿನ: 25. ವಿಷ್ಣು ಸಹಸ್ರನಾಮ ಮಾಡಿ.




ವಾರದ ಶುರುವಿನಲ್ಲಿ ಕೌಟುಂಬಿಕ ವಿಚಾರಕ್ಕೆ ಪ್ರಯಾಣ ಮಾಡಬೇಕಾಗುತ್ತದೆ. ನಿಮ್ಮ ಕಾರ್ಯ ಸಾಮರ್ಥ್ಯ ಹೆಚ್ಚಾಗುತ್ತದೆ. ನಿಮ್ಮ ಆರೋಗ್ಯ ಅಷ್ಟೇನೂ ಉತ್ತಮವಾಗಿ ಇರುವುದಿಲ್ಲ. ಧಾರ್ಮಿಕ ಕೆಲಸ ಕಾರ್ಯಗಳನ್ನು ಮಾಡಲಿದ್ದೀರಿ. ಈ ಮಧ್ಯೆ ಕುಟುಂಬದವರ ಜತೆಗೆ ಉತ್ತಮ ಬಾಂಧವ್ಯ ಏರ್ಪಡುತ್ತದೆ. ಆರೋಗ್ಯ ಸಮಸ್ಯೆಗಳು ಕೂಡ ನಿವಾರಣೆ ಆಗುತ್ತದೆ. ಶುಭದಿನ: **22.** ಗಣೇಶಪಂಚರತ್ನ ಸ್ತೋತ್ರ ಪಠಿಸಿರಿ.




ಉದ್ಯಮದ ವಿಸ್ತರಣೆ ಬಗ್ಗೆ ಆಲೋಚನೆ ಮಾಡುತ್ತೀರಿ. ವೈವಾಹಿಕ ಜೀವನ ಸಂತುಷ್ಟವಾಗಿರುತ್ತದೆ. ಸುತ್ತಾಟದಿಂದ ಆರೋಗ್ಯದಲ್ಲಿ ಏರುಪೇರು ಕಾಣಿಸಿಕೊಳ್ಳಬಹುದು. ಉನ್ನತ ಶಿಕ್ಷಣಕ್ಕೆ ಪ್ರಯತ್ನಿಸುತ್ತಿರುವವರಿಗೆ ಅನುಕೂಲಕರವಾದ ಸಮಯ ಇದು. ರಾಜಕೀಯ ಕ್ಷೇತ್ರದ ಉತ್ತಮ ಪ್ರಗತಿಗೆ ಅವಕಾಶ ದೊರೆಯಲಿದೆ. ಮನೆ ನಿರ್ವಹಣೆಗೆ ಆದ್ಯತೆ ನೀಡಲಿದ್ದೀರಿ. ಶುಭದಿನ: 25. ಲಕ್ಷ್ಮೀನರಸಿಂಹ ಸ್ತೋತ್ರ ಪಠಿಸಿರಿ.